ಟೆನಿಸ್‌ನಲ್ಲಿ ಭಾರತದ ಮಟ್ಟಿಗೆ ಸಾನಿಯಾ ಮಿರ್ಜಾ ಈ ವರ್ಷದ 'ಡಾರ್ಲಿಂಗ್'. ವಿಶ್ವದ 'ನಂಬರ್ ಒನ್ ಡಬಲ್ಸ್ ಆಟಗಾರ್ತಿ'ಯ ಪಟ್ಟ. ಗೆಳತಿ ಮಾರ್ಟಿನಾ ಹಿಂಗಿಸ್ ಜತೆಗೆ ಈಕೆಯದ್ದು ಸೋಲೇ ಇಲ್ಲದ ನಾಗಾಲೋಟ.



ದೇಶವೊಂದರ ಇತಿಹಾಸಕ್ಕೆ ಸೇರ್ಪಡೆಯಾಗುವ ಎಲ್ಲ ವರ್ಷಗಳೂ ಮಹತ್ವದ್ದೇ. ಆಯಾ ವರ್ಷಗಳಲ್ಲಿ ನಡೆಯುವ ವಿದ್ಯಮಾನಗಳು ದೇಶದ ಜನಜೀವನವನ್ನು ಹೇಗೆ ಪ್ರಭಾವಿಸುತ್ತವೆ ಎನ್ನುವುದರ ಮೇಲೆ ಈ 'ಮಹತ್ವದ ಮಹತ್ತು' ಅಡಗಿದೆ. ಈ ಹಿನ್ನೆಲೆಯಲ್ಲಿ 2015 ಭಾರತದ ಮಟ್ಟಿಗೆ 'ಅತ್ಯಂತ ಹೆಚ್ಚು ಮಹತ್ವದ ವರ್ಷ' ಎನ್ನಬಹುದು. ಜಗತ್ತಿನ ಯಾವ ದೇಶದಲ್ಲೂ ಇರದಷ್ಟು ಪ್ರಾಕೃತಿಕ ಮತ್ತು ಸಾಂಸ್ಕೃತಿಕ ವೈವಿಧ್ಯತೆ ಉಳ್ಳ ದೇಶವಿದು. ಇಲ್ಲಿರುವಷ್ಟು ಧರ್ಮಗಳು ಎಲ್ಲೂ ಇಲ್ಲ; ಇಲ್ಲಿರುವಷ್ಟು ಜಾತಿಗಳೂ ಬೇರೆಡೆ ಇಲ್ಲ. ಇಲ್ಲಿ ಶ್ರೀಮಂತರ ಸಂಖ್ಯೆ ಒಂದೇ ಸಮನೆ ಏರುತ್ತಿದೆ; ಬಡವರ ಸಂಖ್ಯೆಯೂ ಅದಕ್ಕೆ ದುಪ್ಪಟ್ಟು ಎಂಬಂತೆ ಏರುತ್ತಿದೆ. ಅರ್ಥಶಾಸ್ತ್ರಜ್ಞರು ದೇಶದ ಆರ್ಥಿಕ ವೃದ್ಧಿದರ ಶೇಕಡಾ 7.5 ದಾಟಿದ ಬಗ್ಗೆ ಖುಷಿಯಾಗಿದ್ದಾರೆ. ಜನಸಾಮಾನ್ಯರು ಬೇಳೆಕಾಳು, ಪೆಟ್ರೋಲ್, ರೈಲು, ಬಸ್ಸಿನ ಟಿಕೆಟ್‌ಗಳ ಬೆಲೆ ಏರಿಕೆಯಿಂದ ದುಗುಡಕ್ಕೆ ಒಳಗಾಗಿದ್ದಾರೆ. ಹೆಣ್ಣುಮಕ್ಕಳ ಸಂಕಷ್ಟಗಳು ಎಂದಿನಂತೆ ಸುದ್ದಿಯಾಗುತ್ತಿವೆ. ಈ ಎಲ್ಲ ಏರಿಳಿತಗಳ ನಡುವೆಯೂ ಈ ವಿಶಾಲ ದೇಶ, ಒಂದು ರಾಜಕೀಯ ಒಕ್ಕೂಟ ಘಟಕವಾಗಿ, ಪ್ರಜಾಪ್ರಭುತ್ವವನ್ನು ಅದರ ಎಲ್ಲ ವೈಶಿಷ್ಟ್ಯ ಮತ್ತು ವೈರುಧ್ಯಗಳೊಂದಿಗೆ ಉಳಿಸಿ ಬೆಳೆಸಿಕೊಂಡು ಬಂದಿದೆ.

2015 ಕೂಡಾ ಈ ವೈರುಧ್ಯ ಮತ್ತು ವೈಶಿಷ್ಟ್ಯಗಳಿಗೆ ತನ್ನದೇ ಆದ ಕೊಡುಗೆ ನೀಡಿದೆ. ಈ ವರ್ಷ ಹಲವು ಭಾರತೀಯರು ಹೊಸ ಸಾಧನೆಗಳ ಶಿಖರಗಳನ್ನು ಏರಿದ್ದಾರೆ. ಅಳುವವರಿಗೆ 'ಸಾಥ್' ನೀಡಿದ್ದಾರೆ, ಆಳುವವರಿಗೆ 'ಶಾಕ್' ನೀಡಿದ್ದಾರೆ! ಇಡೀ ದೇಶವನ್ನೇ ಚರ್ಚೆಯ ಅಗ್ನಿಕುಂಡಕ್ಕೆ ದೂಡಿದ 'ಸಹಿಷ್ಣುತೆ–ಅಸಹಿಷ್ಣುತೆ'ಯ ಬಗ್ಗೆ ಜನಸಾಮಾನ್ಯರು, ಚಿತ್ರನಟರು, ಧರ್ಮಗುರುಗಳಿಂದ ಹಿಡಿದು, ಸಂಸತ್ತಿನ ಸದಸ್ಯರವರೆಗೆ ಎಲ್ಲರೂ ಬಹುದೊಡ್ಡ ಚರ್ಚೆಯಲ್ಲಿ ಪಾಲ್ಗೊಂಡಿದ್ದಾರೆ. ಚರ್ಚೆ ನಡೆಯುತ್ತಲೇ ಇದೆ; ಅಸಹಿಷ್ಣುತೆಯ ಘಟನೆಗಳೂ ನಡೆಯುತ್ತಿವೆ! 'ಅಸಹಿಷ್ಣುತೆ ಇವತ್ತಿನದ್ದಲ್ಲ; ಎಷ್ಟೋ ವರ್ಷಗಳಿಂದ ಇದೆ' ಎಂದು ಒಂದು ವರ್ಗ ಸಮಾಧಾನ ಹೇಳಿದರೆ; 'ಇದ್ದಿರಬಹುದು, ಆದರೆ ಈ ವರ್ಷ ಅದು ಮಿತಿಮೀರಿದೆ' ಎಂದು ಇನ್ನೊಂದು ವರ್ಗ ಅಸಹಿಷ್ಣುವಾಗತೊಡಗಿದೆ. ಒಟ್ಟಾರೆ 2015 ಭಾರತದ ಮಟ್ಟಿಗೆ ಗಮನಾರ್ಹ ವರ್ಷ. ದೇಶದ ಆಂತರ್ಯದಲ್ಲಿ ಹೊಸ 'ಸಾಂಸ್ಕೃತಿಕ ಸಮುದ್ರ ಮಥನ'ವೊಂದು ಆರಂಭವಾಗಿರುವ ವರ್ಷ. ಸಿಗುವುದು ಹಾಲಾಹಲವೋ, ಅಮೃತವೋ ಎನ್ನುವುದನ್ನು ಕಾಲವೇ ನಿರ್ಧರಿಸಬೇಕು.

ವರ್ಷದ ಎಲ್ಲ ಘಟನೆಗಳನ್ನು ಪಟ್ಟಿ ಮಾಡುವುದು ಸುಲಭ. ಆದರೆ ಯಾವ ಘಟನೆಗಳು ಎಷ್ಟು ಮಹತ್ವದ್ದು ಎಂದು ವರ್ಗೀಕರಿಸುವುದು ಕಷ್ಟದ ಕೆಲಸ. ಹಾಗೆ ವರ್ಗೀಕರಿಸುವಾಗಲೂ ಅದು ಅವರವರ ದೃಷ್ಟಿಕೋನಕ್ಕೆ ಬಿಟ್ಟದ್ದು. ಹಿಂದೊಂದು ಕಾಲವಿತ್ತು– ಈ ವಿಶಾಲದೇಶವನ್ನು ಒಗ್ಗೂಡಿಸುವುದು ಬಿಬಿಸಿ ಮತ್ತು ರಾಷ್ಟ್ರೀಯ ಹೆದ್ದಾರಿಗಳು– ಎಂದು ಆಗ ಹೇಳುತ್ತಿದ್ದರು. ಈಗ ಹಾಗಲ್ಲ. ನೂರಾರು ಟಿವಿ ಚಾನೆಲ್‌ಗಳು ಹುಟ್ಟಿಕೊಂಡಿವೆ. ಜತೆಗೆ ಸಾಮಾಜಿಕ ಜಾಲತಾಣಗಳು ಇಡೀ ದೇಶವನ್ನು ಒಂದು ಮಾಡಿರುವ ವಿಶಿಷ್ಟ ಕಾಲಘಟ್ಟದಲ್ಲಿ ನಾವು ವಾಸಿಸುತ್ತಿದ್ದೇವೆ. ದೇಶದ ಯಾವುದೋ ಮೂಲೆಯಲ್ಲಿ ಆಗುವ ಒಂದು ಸಣ್ಣ ಘಟನೆಯ ಸಂಪೂರ್ಣ ವಿವರಗಳೂ 'ಗೂಗಲ್'ನಲ್ಲಿ ಹುಡುಕಾಡಿದರೆ ಕ್ಷಣಮಾತ್ರದಲ್ಲಿ ಸಿಗುತ್ತದೆ. ಆ ಸುದ್ದಿಗೆ ಕ್ಷಣಮಾತ್ರದಲ್ಲಿ ಪ್ರತಿಕ್ರಿಯೆಯೂ 'ಫೇಸ್‌ಬುಕ್', 'ಟ್ವಿಟ್ಟರ್'ನಲ್ಲಿ ಹರಡುತ್ತದೆ. ಆ ನಿಟ್ಟಿನಲ್ಲಿ ಇಡೀ ದೇಶವೇ ಏಕತ್ರವಾಗಿದೆ.

ಗೂಗಲ್ ಸಂಸ್ಥೆಯವರು ಕಳೆದ ವಾರ, 'ಭಾರತದಲ್ಲಿ 2015ರ ವರ್ಷದ ವ್ಯಕ್ತಿ– ಹಸು' ಎಂದು ಪ್ರಕಟಿಸಿ, ಹಸುವಿನ ಚಿತ್ರವೊಂದನ್ನು ಹಾಕಿದರು. ಆಗುಂಬೆಯ ಮಳೆಯಂತೆ ಅದಕ್ಕೆ ಪ್ರತಿಕ್ರಿಯೆಗಳು ಮುಗಿಬಿದ್ದವು. 'ನೀವು ಪ್ರಕಟಿಸಿರುವುದು ವಿದೇಶೀ ತಳಿ ಜರ್ಸಿ ಹಸುವಿನ ಚಿತ್ರ. ನಮ್ಮ ಭಾರತದ್ದು ದೇಶೀ ತಳಿಯ ಹಸು' ಎಂದು ಹಲವರು ಕಟಕಿದರು! ಇದು ಭಾರತ; ಇಲ್ಲಿ ಮಾತನಾಡಿದರೆ ಮಹಾಭಾರತ!



ವರ್ಷದ ವಿವಾದ

ವರ್ಷದ ಆರಂಭದಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಧರಿಸಿದ ಕೋಟಿನದ್ದೇ ಸುದ್ದಿ. ಅಮೆರಿಕದ ಭೇಟಿಗೆ ಹೊರಟ ಪ್ರಧಾನಿ ಮೋದಿಯವರು, ಸುಮಾರು 10 ಲಕ್ಷ ರೂಪಾಯಿ ಬೆಲೆಯ ಕೋಟು ಧರಿಸಿದ್ದು, ಅದರ ಎದೆಯ ಮೇಲೆ ನರೇಂದ್ರ ದಾಮೋದರ ದಾಸ ಮೋದಿ ಎಂದು ಚಿನ್ನದ ಎಳೆಯಲ್ಲಿ ಎಂಬ್ರಾಯಿಡರಿ ಹೆಸರು ಬರೆದದ್ದು– ಬೆಂಬಲಿಗರ ಖುಷಿಗೆ ಕಾರಣವಾದರೆ, ವಿರೋಧಿಗಳ ಟೀಕೆಗೆ ಅಸ್ತ್ರವಾಯಿತು. ಈ ಕೋಟಿನ ನೆನಪಿನಿಂದ ರಾಜಕೀಯ ವಿರೋಧಿಗಳು ಈಗಲೂ ಹೊರಬಂದಿಲ್ಲ. ಅಮೆರಿಕ ಪ್ರವಾಸದ ಬಳಿಕ ಆ ಕೋಟನ್ನು 7 ಲಕ್ಷ ಡಾಲರ್ ಬೆಲೆಗೆ ಏಲಂ ಮಾಡಿ, ಆ ಹಣವನ್ನು ಚಾರಿಟಿಯೊಂದಕ್ಕೆ ನೀಡಲಾಯಿತು.

ಫೆಬ್ರುವರಿಯಲ್ಲಿ ಸುದ್ದಿ ಚಾನೆಲ್‌ಗಳಿಗೆ ಬಹುದೊಡ್ಡ ಆಹಾರವಾದದ್ದು ಭಾರತ– ಪಾಕಿಸ್ತಾನ ನಡುವಣ ಐಸಿಸಿ ವಿಶ್ವಕಪ್– 2015ರ ಕ್ರಿಕೆಟ್ ಪಂದ್ಯ. ಮೊದಲ ಸುತ್ತಿನಲ್ಲೇ ಎದುರಾಳಿಯಾದ ಪಾಕಿಸ್ತಾನ ತಂಡವನ್ನು ಬಗ್ಗುಬಡಿದ ಭಾರತ ತಂಡ ಜಯಭೇರಿ ಬಾರಿಸಿತು. ಈ ವರ್ಷ ಅತ್ಯಧಿಕ ಜನರು ವೀಕ್ಷಿಸಿದ ಕ್ರೀಡೆಯಿದು ಎಂದ ದಾಖಲೆಯೂ ನಿರ್ಮಾಣವಾಯಿತು. ಆದರೆ ಪಾಕಿಸ್ತಾನದ ವಿರುದ್ಧದ ಜಯದ ಓಟವನ್ನು ಕೊನೆಯವರೆಗೆ ಉಳಿಸಿಕೊಳ್ಳಲು ಭಾರತಕ್ಕೆ ಸಾಧ್ಯವಾಗಲಿಲ್ಲ. 2011ರ ಐಸಿಸಿ ಚಾಂಪಿಯನ್ ಆಗಿದ್ದ ಭಾರತ ಸೆಮಿಫೈನಲ್‌ನಲ್ಲಿ ಆಸ್ಟ್ರೇಲಿಯಾ ವಿರುದ್ಧ ಸೋಲಪ್ಪಿ ಟೂರ್ನಿಯಿಂದ ಹೊರಬಿತ್ತು.



ದೆಹಲಿಯ ಟ್ರಾಫಿಕ್- ಹೊಗೆ- ಧಗೆ

33ರ ಹರೆಯದ ಮುಮ್ತಾಜ್ ಶೇಖ್ ಮಹಿಳೆಯರ ಶೌಚಾಲಯ ಹಕ್ಕಿಗೆ ಹೋರಾಡಿ ಗೆದ್ದ ಮುಂಬೈಯ ಧೀರಮಹಿಳೆ. ಈಕೆ ಸ್ಥಾಪಿಸಿದ right to pee ಮುಂಬೈಯಲ್ಲಿ ಮಹಿಳೆಯರಿಗೇ ಮೀಸಲಾದ 96 ಶೌಚಾಲಯಗಳ ಸ್ಥಾಪನೆಗೆ ಕಾರಣವಾಗಿದೆ. ಅಲ್ಲಿನ ಪಾಲಿಕೆ ಇನ್ನೂ ಐದು ಕೋಟಿ ರೂಪಾಯಿಗಳನ್ನು ಈ ಉದ್ದೇಶಕ್ಕೆಂದೇ ಬಿಡುಗಡೆ ಮಾಡಿದೆ.



ಫೆಬ್ರುವರಿ ತಿಂಗಳಲ್ಲಿ ಕೇಂದ್ರದ ಎನ್‌ಡಿಎ ಸರಕಾರಕ್ಕೆ ಮೊದಲ ಬಿಸಿ ಮುಟ್ಟಿಸಿದ್ದು ದೆಹಲಿ ವಿಧಾನಸಭೆಯ ಚುನಾವಣೆ. ಆಮ್ ಆದ್ಮಿ ಪಕ್ಷ (ಆಪ್) ಬಿಜೆಪಿ ಮತ್ತು ಕಾಂಗ್ರೆಸ್ ಎರಡೂ ಪಕ್ಷಗಳ ನೇತೃತ್ವಕ್ಕೆ ಮುಖಭಂಗ ಉಂಟು ಮಾಡಿ, ದೆಹಲಿಯಲ್ಲಿ ಅಧಿಕಾರ ಗದ್ದುಗೆ ಹಿಡಿಯಿತು. ಕೇಂದ್ರದಲ್ಲಿ ಅಧಿಕಾರ ಹಿಡಿದ ಪಕ್ಷವೇ ದೆಹಲಿಯಲ್ಲೂ ಅಧಿಕಾರ ಹಿಡಿಯುತ್ತದೆ ಎಂಬ ನಂಬಿಕೆಯನ್ನು ಸುಳ್ಳಾಗಿಸಿದ ಆಮ್ ಆದ್ಮಿ ಪಕ್ಷದ ಮುಖ್ಯಮಂತ್ರಿ ಕೇಜ್ರಿವಾಲ್, ಬಿಜೆಪಿ ಗೆ ಮಗ್ಗುಲ ಮುಳ್ಳಾಗಿ ಕಾಡುತ್ತಿದೆ ಎನ್ನುವುದು ವರ್ಷದ ಕೊನೆಯಲ್ಲಿ ಕೇಂದ್ರ ಸಚಿವ ಅರುಣ್ ಜೇಟ್ಲಿ ವಿರುದ್ಧದದ ಭ್ರಷ್ಟಾಚಾರದ ಆರೋಪದ ಮೂಲಕವೂ ಸಾಬೀತಾಗಿದೆ.

ನೆರೆಯ ದೇಶ ಪಾಕಿಸ್ತಾನದ ಜತೆಗೆ ನಮ್ಮ ಸಂಬಂಧ ವರ್ಷದ ಉದ್ದಕ್ಕೂ ಕಿರಿಕಿರಿಯದ್ದೇ ಆಗಿತ್ತು. ಮುಖ್ಯವಾಗಿ ಮುಂಬೈ ಸ್ಫೋಟ ಪ್ರಕರಣದಲ್ಲಿ ಪಾಕಿಸ್ತಾನದಲ್ಲಿ ತರಬೇತಿ ಪಡೆದ ಉಗ್ರರು ಸಿಕ್ಕಿಬಿದ್ದ ಬಳಿಕ ಉಭಯದೇಶಗಳ ನಡುವಣ ಸಂಬಂಧದಲ್ಲಿ ಉಗ್ರಗಾಮಿಗಳ ಉಪಟಳವೇ ಅತಿ ಹೆಚ್ಚು ಕಂದಕವನ್ನು ಉಂಟು ಮಾಡುತ್ತಿದೆ. ಗಡಿಯಲ್ಲಿ ಉಗ್ರರು ನುಸುಳುವುದನ್ನು ತಡೆಯಲು ಗಡಿಯುದ್ದಕ್ಕೂ ಫ್ಲಡ್‌ಲೈಟ್‌ಗಳನ್ನು ಹಾಕಿದ್ದು, ಈ ಬೆಳಕು ಅಂತರಿಕ್ಷದಿಂದಲೂ ಎದ್ದು ಕಾಣುತ್ತಿದೆ! ವರ್ಷದ ಆರಂಭದಲ್ಲಿ ದೆಹಲಿಯ ಪೊಲೀಸರು ಪಾರಿವಾಳವೊಂದನ್ನು ಬಂಧಿಸಿದರು. ಈ ಪಾರಿವಾಳ ಪಾಕಿಸ್ತಾನಕ್ಕೆ ರಹಸ್ಯ ಮಾಹಿತಿಯನ್ನು ಕೊಂಡೊಯ್ಯುತ್ತಿತ್ತು. ಅದಕ್ಕೆಂದೇ ತರಬೇತಿ ನೀಡಲಾಗಿದೆ ಎನ್ನುವುದು ಭಾರತದ ಅಧಿಕಾರಿಗಳ ಅನುಮಾನವಾಗಿತ್ತು! ಕೊನೆಗೆ ತನಿಖೆ ನಡೆಸಿದ ಪೊಲೀಸರು, ಇದೊಂದು ರೇಸ್ ತರಬೇತಿ ಪಡೆದಿರುವ ಪಾರಿವಾಳ ಎಂದಷ್ಟೇ ಖಚಿತಪಡಿಸಿದರು.

ಭಾರತ–ಪಾಕಿಸ್ತಾನ ನಡುವಣ ಟೆನ್ಶನ್ ಗೆ ಬಲಿಯಾದದ್ದು ಖ್ಯಾತ ಗಝಲ್ ಗಾಯಕ ಪಾಕಿಸ್ತಾನದ ಗುಲಾಂ ಅಲಿಯವರ ಭಾರತ ಪ್ರವಾಸ. ಲಖನೌ, ದೆಹಲಿ,

2015